5604(6525) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದಿನ ಸಾಲಿನಲ್ಲಿ ರೈತರ ಒಟ್ಟು ಬೆಳೆಸಾಲ ಎಷ್ಟು?

ಆ) ಅದರಲ್ಲಿ ಜೂನ್ 30 ರೊಳಗಾಗಿ ಮರುಪಾವತಿಯಾದ ಸಾಲ ಎಷ್ಟು? (ಜಿಲ್ಲಾವಾರು ವಿವರ ನೀಡುವುದು.)

ಇ) ಈ ಮರುಪಾವತಿ ಮಾಡಿದ ರೈತರಿಗೆ 6% ಬಡ್ಡಿ ದರದಲ್ಲಿ ವಿತರಣೆಯಾದ ಹೊಸ ಬೆಳೆ ಸಾಲ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಈ) ಎಷ್ಟು ಜನ ರೈತ ಸದಸ್ಯರಿಗೆ ಈ ವರ್ಷ ಹೊಸದಾಗಿ 6% ಬಡ್ಡಿಯಲ್ಲಿ ಬೆಳೆ ಸಾಲ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಉ) ಇದರಲ್ಲಿ ಸಣ್ಣ ಅತಿ ಸಣ್ಣ ರೈತರ ಪಾಲೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಊ) ಅದರಲ್ಲಿ ಎಸ್.ಸಿ/ಎಸ್.ಟಿ/ಬಿ.ಸಿ. ರೈತರ ಪಾಲೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಋ) ಒಟ್ಟು ಬೆಳೆ ಸಾಲದ ವಿತರಣೆಯಲ್ಲಿ (6% ಬಡ್ಡಿದರದ) ಎಸ್.ಸಿ./ಎಸ್.ಟಿ./ಬಿ.ಸಿ. ರೈತರಿಗೆ ಹೆಚ್ಚಿನ ಪಾಲು ದೊರಕುವ ಹಾಗೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ ಹಿಂದಿನ ಸಾಲಿನಲ್ಲಿ ಅಂದರೆ 31–3–2004ರ ಅಂತ್ಯಕ್ಕೆ ಇರುವ ರೈತರ ಒಟ್ಟು ಬೆಳೆ ಸಾಲ ರೂ. 1832.77 ಕೋಟಿಗಳು.

ಆ) ಅದರಲ್ಲಿ ಜೂನ್ 30 ರೊಳಗಾಗಿ ಮರುಪಾವತಿ ಮಾಡಿದ ಸಾಲ ರೂ. 368.64 ಕೋಟಿಗಳು, ಜಿಲ್ಲಾ ಬ್ಯಾಂಕ್‌ವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) 1–4–2004 ರಿಂದ 31–3–2005ರ ಅವಧಿಯಲ್ಲಿ ರೂ. 1188.08 ಕೋಟಿ ಬೆಳೆ ಸಾಲ ವಿತರಿಸಲಾಗಿದೆ. ಜಿಲ್ಲಾ ಬ್ಯಾಂಕುವಾರು ಮಾಹಿತಿ ಅನುಬಂಧದಲ್ಲಿ ಒದಗಿಸಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ ದಿನಾಂಕ: 1–4–2005 ರಿಂದ 30–6–2005 ರ ಅವಧಿಯಲ್ಲಿ 3,26,267 ಜನ ರೈತರಿಗೆ ಬೆಳೆ ಸಾಲ ವಿತರಿಸಿದೆ. ಜಿಲ್ಲಾ ಬ್ಯಾಂಕುವಾರು ಮಾಹಿತಿ ಅನುಬಂಧದಲ್ಲಿ ಒದಗಿಸಲಾಗಿದೆ.

ಉ) ಇದರಲ್ಲಿ 1,70,135 ಸಣ್ಣ ಮತ್ತು ಅತಿ ಸಣ್ಣ ರೈತರು ಇರುತ್ತಾರೆ. ಜಿಲ್ಲಾ ಬ್ಯಾಂಕ್‌ವಾರು ಮಾಹಿತಿ ಅನುಬಂಧದಲ್ಲಿ ಒದಗಿಸಲಾಗಿದೆ.

ಊ) ಇದರಲ್ಲಿ 1988 ಎಸ್.ಸಿ./ಎಸ್.ಟಿ./ಬಿ.ಸಿ. ರೈತರು ಇರುತ್ತಾರೆ. ಜಿಲ್ಲಾ ಬ್ಯಾಂಕ್‌ವಾರು ಮಾಹಿತಿ ಲಗತ್ತಿಸಿದೆ.

ಋ) ಎಸ್.ಸಿ. /ಎಸ್/ಟಿ./ಬಿ.ಸಿ. ರೈತರಿಗೆ ಹೆಚ್ಚಿನ ಪಾಲು ದೊರಕುವ ಹಾಗೆ ಮಾಡಲು ಸಂಬಂಧಿಸಿದ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆಯಲು ಸರ್ಕಾರದಿಂದ ಷೇರುಧನ ನೀಡಲಾಗುತ್ತಿದೆ.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲರವರ ಪ್ರಶ್ನೆ ಸಂಖ್ಯೆ. 6525ಕ್ಕೆ ಅನುಬಂಧ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲಾ ಬ್ಯಾಂಕ್, ಕೇಂದ್ರ ಸ್ಥಾನದ ಜಿಲ್ಲೆ ಹೆಸರು	ಜೂನ್ 30 ರೊಳಗಾಗಿ ಮರುಪಾವತಿಯಾಗಿರುವ ಸಾಲದ ಮೊತ್ತ	ಶೇಕಡಾ 6ರ ಬಡ್ಡಿ ದರದಲ್ಲಿ ವಿತರಣೆಯಾದ ಬೆಳೆಸಾಲ	ದಿ: 1-4-2005 ರಿಂದ 30-6-2005ರಲ್ಲಿ ಹೊಸದಾಗಿ ಶೇ. 6ರ ಬಡ್ಡಿದರದಲ್ಲಿ ವಿತರಣೆಯಾದ ಬೆಳೆಸಾಲದ ರೈತರ ಸಂಖ್ಯೆ	ಇದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ	ಎಸ್.ಸಿ./ಎಸ್.ಟಿ./ ಬಿ.ಸಿ. ರೈತರ ಸಂಖ್ಯೆ
1	2	3	4	5	6	7
1	ಬೆಂಗಳೂರು	21.14	620.26	208	77	101
2	ಕೋಲಾರ	45.95	127.98	0	0	360
3	ಚಿತ್ರದುರ್ಗ	324.99	1,480.62	3858	2124	932
4	ಶಿವಮೊಗ್ಗ	207.07	7,808.68	27895	24624	2250
5	ದಾವಣಗೆರೆ	1670.26	6,839.94	8646	0	1777
6	ತುಮಕೂರು	1275.38	3,379.72	6080	2922	1775
7	ಮೈಸೂರು	931.11	4,500.20	13388	11412	131
8	ಮಂಡ್ಯ	395.06	4,334.97	18895	35	860

1	2	3	4	5	6	7
9	ಹಾಸನ	770.87	4,153.03	9952	6679	710
10	ದಕ್ಷಿಣ ಕನ್ನಡ	10462.21	12,673.34	ಎನ್ಎ	ಎನ್ ಎ	102
11	ಕೊಡಗು	3478.06	5,230.70	15478	5154	1232
12	ಚಿಕ್ಕಮಗಳೂರು	155.65	1,606.90	1853	1186	188
13	ಬೆಳಗಾಂ	5474.50	13,725.32	127192	62622	3892
14	ಬಿಜಾಪುರ	1338.09	9,279.22	10471	5718	7272
15	ಬಾಗಲಕೋಟೆ	3341.28	13,144.37	4980	2542	4572
16	ಧಾರವಾಡ	102.93	2,327.73	17212	7745	3610
17	ಉತ್ತರಕನ್ನಡ	3999.36	4,630.49	14794	11978	277
18	ಗುಲ್ಬರ್ಗಾ	0.00	3,923.87	7016	2868	4200
19	ಬೀದರ್	449.66	11,289.05	23439	15444	4167
20	ರಾಯಚೂರು	1735.62	4,653.25	7320	2891	300
21	ಬಳ್ಳಾರಿ	684.69	3,078.23	7590	4114	2280